# ಪರೀಕ್ಷೆಯ ಮೇಲ್ವಿಚಾರಣೆ

ಬೇರೆಯವರಿಗೆ ಹೇಗೋ ನನಗೆ ಗೊತ್ತಿಲ್ಲ, ಅಧ್ಯಾಪಕನಾಗಿರುವ ನನಗೆ ಈ ಪರೀಕ್ಷೆಯ ಮೇಲ್ವಿಚಾರಣೆಯೆನ್ನುವುದು ಇಷ್ಟದ ಕೆಲಸ. ಬುದ್ಧನಿಗೆ ಬೋಧಿವೃಕ್ಷದ ಕೆಳಗೆ ಜ್ಞಾನೋದಯವಾದಂತೆ ನನಗೆ ನನ್ನ ವಿದ್ಯಾರ್ಥಿ ದೆಸೆಯಲ್ಲಿ ಪರೀಕ್ಷೆಯ ದಿನಗಳಲ್ಲಿ ಆಗದ ಹಲವಾರು ಅನುಭವಗಳು, ಮನೋರಂಜನೆ ಮತ್ತು ಜ್ಞಾನದ ಉದಯ ಈ ಮೇಲ್ವಿಚಾರಣೆಯ ಸಂದರ್ಭದಲ್ಲಿ ಆಗುತ್ತದೆ. ಥೇಟ್ ಕುರಿಗಳಂತೆ ತಲೆಬಗ್ಗಿಸಿ ತನ್ಮಯರಾಗಿ ಬರೆಯತೊಡಗುವ ಮಕ್ಕಳು ನನ್ನ ಪಾಲಿಗೆ ಅನುಭವವನ್ನು ಕೊಡುವ ಭಂಡಾರದಂತೆ. ದೇಶ ಸುತ್ತಿ, ಕೋಶ ಓದಿದರೆ ದೊರಕುವ ಜೀವನಾನುಭವಕ್ಕೆ ಸಾಟಿಯಾದದ್ದು ಬಹುಶಃ ಮನೆ ಕಟ್ಟಿ, ಮದುವೆ ಮಾಡಿದ ಮೇಲೆಯೇ ಇರಬೇಕೆಂದು ಹಳೆಯವರ ಅಂಬೋಣ. ಕೆಲವರಿಗೆ ಇವುಗಳ ಜೊತೆಗೆ ಕಟಿಂಗ್ ಶಾಪುಗಳಲ್ಲಿ, ಆಸ್ಪತ್ರೆಯ ಮೆತ್ತೆಯ ಮೇಲೆ ನರಳುತ್ತಾ ಇಹಪರದ ಜ್ಞಾನವಿಲ್ಲದಿರುವಾಗ, ಮನೆಯ ಶೌಚಾಲಯದಲ್ಲಿ ತಿಣುಕುತ್ತಾ ಆಳದಿಂದ ಬರುವ ಸುಖಕ್ಕೆ ಕಾಯುತ್ತಿರುವಾಗ, ಅನ್ಯರಲ್ಲಿ ಎಂದೋ ಕೊಟ್ಟ ತಮ್ಮದೇ ವಸ್ತುಗಳನ್ನು ಮರಳಿ ಬೇಡುವಾಗ, ನೋಟುಗಳನ್ನು ಬದಲಾಯಿಸಿಕೊಳ್ಳಲು ಇಷ್ಟುದ್ದಾsss ಸಾಲಿನಲ್ಲಿ ಕೊನೆಯವರಾಗಿ ನಿಂತಿರುವಾಗ... ಹೀಗೇ ಹಲವಾರು ಸಂದರ್ಭಗಳು ಜೀವನಾನುಭವವನ್ನು ಕಲಿಸಿಕೊಡುವಂತೆ ಪ್ರತೀ ಪರೀಕ್ಷೆಯ ಮೇಲ್ವಿಚಾರಣೆಯ ವೇಳೆ ನನ್ನ ಅನುಭವದ ಮೂಟೆ ದೊಡ್ಡದಾಗುತ್ತದೆ. ಅಲ್ಲಿನ ಹಲವಾರು ವಿದ್ಯಮಾನಗಳು ನಗೆಯನ್ನು ತರಿಸುತ್ತವೆ, ಮನರಂಜನೆಯನ್ನು ನೀಡುತ್ತವೆ.

ಆಹಾ! ಆ ಪರೀಕ್ಷೆಗಳೋ? ಮ್ಲಾನ ವದನದ ತರುಣ ತರುಣಿಯರೋ? ಎಂದೂ ಇಲ್ಲದ ಗಾಢ ಮೌನವೋ? ಪರೀಕ್ಷೆಗಳು ಬೇಸಿಗೆಯಲ್ಲಿದ್ದರೂ, ಚಳಿಗಾಲದಲ್ಲಿದ್ದರೂ ಹಠಾತ್ತನೆ ಮೋಡ ಕವಿದು ಕಪ್ಪಾಗಿ ಅಕಾಲದಲ್ಲಿ ಸುರಿಯುವ ಮಳೆಯೋ? ನೀರವ ಮೌನವನ್ನು ಸೀಳುವಂತೆ ಆಗೊಮ್ಮೆ, ಈಗೊಮ್ಮೆ ತಿರುಗುವ ಫ್ಯಾನಿನಿಂದ ಹೊಮ್ಮುವ ಕೀರಲು ಶಬ್ದಗಳೋ? ಗಳಿಗೆಗೊಮ್ಮೆ ತಮ್ಮ ವಾಚಿನ ಕಡೆಗೂ, ಅಗೋಚರನಾದ ಬದುಕಿನ ನಿರ್ಮಾತೃವು ನೆಲೆಸಿರಬಹುದಾದ ಆಕಾಶದ ಕಡೆಗೂ ಹರಿಯುವ ನೋಟಗಳೋ? ಒಂದೇ ಎರಡೇ? ಪ್ರತಿಯೊಂದೂ ಚಟುವಟಿಕೆಗಳಲ್ಲೂ ಒಂದಲ್ಲಾ ಒಂದು ಅನುಭವವು ಅಡಗಿ ಕುಳಿತಿದೆ.

ಮೇಲ್ವಿಚಾರಣೆಯೆಂಬುದನ್ನು ನೀವು ಹುಡುಗಾಟವೆಂದುಕೊಂಡಿದ್ದೀರೇನು? ಅಲ್ಲಿ ಸುಮ್ಮನೇ ಮೂರು ಗಂಟೆ ಮೂಲೆಯಲ್ಲಿ ಕುರ್ಚಿ ಹಾಕಿ ಕುಳಿತು, ತೂಕಡಿಸಿ, ಕಾಲ ಹರಣ ಮಾಡಿದರೆ ಆಯಿತೆಂದುಕೊಂಡಿದ್ದೀರಾ ನೀವು? ಛೇ, ಛೇ... ನಿಮ್ಮ ಊಹೆ ತಪ್ಪು. ವರ್ಷಾವಧಿ ಶಿಕ್ಷಕರಾಗಿರುವ ನಾವು ಮೇಲ್ವಿಚಾರಣೆಯ ಸಂದರ್ಭದಲ್ಲಿ ಹಲವಾರು ಪಾತ್ರಗಳನ್ನು ನಿಭಾಯಿಸಬೇಕಾಗುತ್ತದೆ.